<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>S.C.103/2017</u>

ದಿಃ 07.07.2023

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-21 Pw-15

| | | |
|---|---|---|
| ಹೆಸರು | ಃ | ಅರುಣ್ ಕುಮಾರ್ |
| ತಂದೆಯ ಹೆಸರು | ಃ | ಕೇಶವಮೂರ್ತಿ |
| ವಯಸ್ಸು | ಃ | 34 ವರ್ಷ |
| ಉದ್ಯೋಗ | ಃ | ಡ್ರೈವರ್ |
| ವಾಸಸ್ಥಳ | ಃ | ವಿಜಯನಗರ,ಬೆಂಗಳೂರು |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ಈಗ ಸುಮಾರು 5 ವರ್ಷಗಳ ಹಿಂದೆ ನನ್ನ ಟಿಟಿ ವಾಹನದ ಮೇಲೆ ಧನರಾಜ್ ಎಂಬ ವ್ಯಕ್ತಿ ಚಾಲನಾಗಿದ್ದು ಆತನು ಮಂಗಳೂರಿಗೆ ಬಾಡಿಗೆ ತರಲು ಹೋಗಿದ್ದನು.

2. ನಂತರ ಸುಮಾರು 1 ತಿಂಗಳ ಮೇಲೆ ಸದರಿ ಮಾಗಡಿ ಪೊಲೀಸ್ ಠಾಣೆಯಲ್ಲಿ ಪೊಲೀಸರು ನನ್ನನ್ನು ಕರೆಯಿಸಿ ಒಂದು ದಸ್ತಾವೇಜಿನ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ.

3. ಸದರಿ ದಸ್ತಾವೇಜನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಅದನ್ನು ಈಗ ನಿಪಿ 17 ಎಂದು ಮತ್ತು ಅದರ ಮೇಲಿರುವ ನನ್ನ ಸಹಿಯನ್ನು ಈಗ ನಿಪಿ 17 ಎ ಎಂದು ಗುರುತಿಸಲಾಯಿತು.

4. ಸದರಿ ನನ್ನ ಟಿಟಿ ವಾಹನಕ್ಕೆ ಸಂಬಂಧಿಸಿದ 2 ವರ್ಣರಂಜಿತ ಛಾಯಾಚಿತ್ರಗಳನ್ನು ನೋಡಿ ಗುರುತಿಸುತ್ತಿದ್ದು, ಅವುಗಳನ್ನು ಈಗ ಕ್ರಮವಾಗಿ ನಿಪಿ 18 ಮತ್ತು 19 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ. ಆರ್ ಕೆ ಎಸ್., ವಕೀಲರಿಂದ ಆರೋಪಿಗಳ ಪರವಾಗಿಃ

5. ನಿಪಿ 17ರಲ್ಲಿ ಪೊಲೀಸರು ಏನು ಬರೆದುಕೊಂಡಿರುತ್ತಾರೆ ಎಂಬುವುದು ನನಗೆ ಮಾಹಿತಿ ಇರುವುರುವುದಿಲ್ಲ ಎಂಬುವುದು ಸರಿ.

6. ಪೊಲೀಸರು ಯಾವುದೇ ನನ್ನ ಹೇಳಿಕೆಯನ್ನು ದಾಖಲಕಿಸಿಕೊಂಡಿರುವುದಿಲ್ಲ.

7. ನಿಪಿ 17ರ ಮೇಲೆ ಬೇರೆ ಇನ್ನು ಯಾರು ಸಹಿ ಮಾಡಿರುತ್ತಾರೆ ಎಂಬುವುದು ನನಗೆ ಗೊತ್ತಿಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.